ಕೂರಿಸಿಕೊಂಡು, ಬೈ ಬೈ ಹೇಳುತ್ತ, ಹೇಳಿಸುತ್ತ ಹೊರಟುಬಿಡುವರು. ನಮ್ಮ ಗೊಂಬೆಮರಿ ಅಳುತ್ತ, ಕರೆಯುತ್ತ, ವಿಧಿಯಿಲ್ಲದೆ ಹೋಗುವಳು. ನನ್ನ ಕರುಳು ಚುರಕ್ ಎನ್ನುವುದು. ಹೀಗೆ ಒಂದೆರಡು ತಿಂಗಳು ಕಳೆದವು. ದಿನಾಲೂ ಅಳು, ತಕರಾರು. ನನಗಂತೂ ಸಾಕಾಗಿ ಹೋಗಿತ್ತು. ಒಂದೇ ಹಾಡು, ಒಂದೇ ರಾಗ. 'ಸ್ಕೂಲು ಬೇಡಮ್ಮ'. ಕರ್ಣಭಯಂಕರವಾಗಿ, ರೋಧಿಸುತ್ತ, ಶಾಲೆಗೆ ಹೋದ ಪುಟ್ಟಿ, ಹೇಗೆ ಹೊತ್ತು ಕಳೆಯುತ್ತಾಳೆ ಎಂಬ ನನ್ನ ಕುತೂಹಲಕ್ಕೆ ಒಂದು ದಿನ ಉತ್ತರ ಸಿಕ್ಕಿತು. ಆ ದಿನ ಎಂದಿನಂತೆ, ನನ್ನ ಪುತ್ರಿಯನ್ನು ಶಾಲೆಗೆ ಮೆರವಣಿಗೆಯಲ್ಲಿ ಕರೆದೊಯ್ಯುವ ಗೆಳತಿ ಆವತ್ತು ಬರುವುದಿಲ್ಲವೆಂದು ಮುಂಚಿತವಾಗಿ ತಿಳಿಸಿದ್ದರು. ಶಾಲೆ ತಪ್ಪಿತು ಎಂಬ ಖುಷಿಯಲ್ಲಿ ಮಗು ಇರುವಾಗ, ನಾನೇ ಅವಳನ್ನು ಕರೆದುಕೊಂಡು ಹೋದೆ. ಶಾಲೆ ಮುಟ್ಟುತ್ತಿದ್ದಂತೆ, ಗೇಟಿನಲ್ಲಿ ಅವಳಿಗೆ ಭವ್ಯ ಸ್ವಾಗತ ಕೋರಿ, ಪುಟಾಣಿಯನ್ನು ಪ್ರೀತಿಯಿಂದ ಎತ್ತಿಕೊಂಡವನು ವಾಚ್‌ಮನ್. 'ಲಕ್ಷ್ಮಣ ಅಂಕಲ್' ಎನ್ನುತ್ತ, ಅವನತ್ತ ಚಿಮ್ಮಿದಳು ಮಗು. ಅವನು, ಇನ್ನು ನಾನು ಹೊರಡಬಹುದೆನ್ನುವಂತೆ, 'ನಿಮ್ಮ ಮಗಳು ನನಗೆ ತುಂಬಾ ಇಷ್ಟ. ದಿನಾ ನನ್ನ ಜೊತೇನೇ, ಆಡಿಕೊಂಡು ಇಲ್ಲೇ ಇರತಾಳೆ. ಸಂಜೆ ಬನ್ನಿ. ಬರತಾಳೆ' ಎಂದ ಆ ಮಹಾನುಭಾವ. ಆಗಲೇ ನನಗೆ ತಿಳಿದಿದ್ದು, 'ಎ ಸೆಕ್ಷನ್'ಗೆ ದಾಖಲಾಗಿದ್ದ ನಮ್ಮ ಪುಟ್ಟಿ, ಅಂದಿನ ವರೆಗೂ ತರಗತಿಯ ಒಳಗೇ ಹೋಗಿಲ್ಲವೆಂಬ ಕಟುವಾಸ್ತವ. ದಾರಿಯಲ್ಲಿ ಅವಳ ಕ್ಲಾಸ್ ಟೀಚರ್ ಸರಸ್ವತಿ ಮಿಸ್ ಸಿಕ್ಕು, 'ಅವಳು ಕ್ಲಾಸ್ ಒಳಗೆ ಬಂದಿಲ್ಲ. ನಾವು ತುಂಬ ಪ್ರಯತ್ನ ಹಾಕಿದೆವು. ಲಕ್ಷ್ಮಣ್ ಅಂಕಲ್, ನನ್ನ ಜೊತೆ ಬಂದು ಕೂತರೆ, ನಾನು ಕ್ಲಾಸಲ್ಲಿ ಇರತೀನಿ. ಹೀಗೆ ಹಟ ಹಿಡೀತಾಳೆ. ಏನು ಮಾಡಬೇಕು ಹೇಳಿ?' ನನ್ನ ಪುತ್ರಿಯ ವಿದ್ಯಾಯಾತ್ರೆಯ ಕತೆ ಕೇಳಿ ಸುಸ್ತಾಗಿ, ಹಿಂದಿರುಗಿದೆ. ಇನ್ನು ಕೆಲವು ದಿನಗಳ ನಂತರ, ನನಗೆ ತಿಳಿದು ಬಂದ ಸಮಾಚಾರ, ಕುವರಿ ಈಗೀಗ ತರಗತಿಯ ಒಳಗೂ ಅಡಿಯಿಡುತ್ತಿದ್ದಾಳೆ. ಆದರೆ, ಅದು ಅವಳು ದಾಖಲಾಗಿರುವ 'ಎ' ಸೆಕ್ಷನ್ ಅಲ್ಲ ಬದಲಿಗೆ 'ಸಿ'ಸೆಕ್ಷನ್. ಪುನಹ 'ಎ' ವಿಭಾಗದ ಶಿಕ್ಷಕಿ ಸರಸ್ವತಿ, ದಾರಿಯಲ್ಲಿ ಆಕಸ್ಮಿಕವಾಗಿ ಭೇಟಿಯಾಗಿ ಶಿಷ್ಯೆಯ ಬಗ್ಗೆ, ಆರೋಪದ ಮಳೆಗೆರೆದರು. ಆ ಸಿಂಚನ ಹೀಗಿತ್ತು. 'ನಿಮ್ಮ ಮಗಳು 'ಎ' ಸೆಕ್ಷನ ಹಾಜರಾತಿ ಪುಸ್ತಕದಲ್ಲಿದಾಳೆ. ಆದರೆ ಅವಳು ಹೋಗೋದು 'ಸಿ' ಸೆಕ್ಷನ್‌ಗೆ. ಮನೇಲಿ ಬುದ್ಧಿ ಹೇಳಿ. ನಾವು ಬೇರೆ ಬೇರೆ ಕಾರಣಗಳಿಗೋಸ್ಕರ, ಈ ರೀತಿ 'ಎ' ಸೆಕ್ಷನ್ ಕೊಟ್ಟಿರತೀವಿ.'ನಾನೇನು ಹೇಳಲಿ, ಆ ಪುಟ್ಟಮಗುವಿಗೆ. ಅಷ್ಟು ಬೇಗ ಶಾಲೆಗೆ ಹಾಕಿದ್ದು ನನ್ನದೇ ತಪ್ಪು. ಆದರೂ ಪಾಪುವನ್ನು ಪ್ರಶ್ನಿಸಿದೆ. ಅದಕ್ಕವಳು ತನ್ನದೇ ಆದ ಮುಗ್ಧರೀತಿಯಲ್ಲಿ ಪ್ರತಿಕ್ರಿಯಿಸಿದಳು, 'ಅಮ್ಮ, ಎ ಸೆಕ್ಷನ್ ಮಿಸ್ ಸಿಡಕ್ತಾರೆ. 'ಸಿ' ಸೆಕ್ಷನ್ ರಮಾ ಮಿಸ್, ನನ್ನ ಎತ್ತುಕೊಂಡು ಮುದ್ದು ಮಾಡತಾರೆ. ನಂಗೆ ಅವರನ್ನ ಕಂಡರೆ ತುಂಬಾ ಪ್ರೀತಿ.' ಮಗು ಹೀಗೆ, ಇಷ್ಟು ನೇರವಾಗಿ ತನ್ನ ಮನದ ಮಾತು ನುಡಿದಾಗ, ನಾನು ಮೂಕಳಾದೆ. ಒಟ್ಟು ವಾಚ್‌ಮಮನ್ ಲಕ್ಷ್ಮಣನ ಸಹವಾಸ ತೊರೆದಾಗಿದೆ. ತರಗತಿಗೆ ಹೆಜ್ಜೆಯೂ ಇಟ್ಟಾಗಿದೆ. ಇದು ಪ್ರಗತಿ ಪಥದ ಸೂಚನೆ ಎಂದು ನಾನು ಸಂತಸಪಟ್ಟೆ. ಪುನಹ ಮತ್ತೊಂದು ಬೇರೆ ಸಂದರ್ಭದ ಭೇಟಿಯಲ್ಲಿ, ಸರಸ್ವತಿ ಮಿಸ್ ಪುನರುಚ್ಚರಿಸಿದರು. 'ನಾವು ನಿಮ್ಮ ಮಗಳನ್ನ ವಿಶೇಷವಾಗಿ 'ಎ' ಸೆಕ್ಷನ್‌ಗೆ ಸೇರಿಸಿಕೊಂಡರೆ, ಅವಳು 'ಸಿ' ಸೆಕ್ಷನಲ್ಲೇ ಟೀಚರ್ ರಮಾ ಹಿಂದೆ ಸುತ್ತುತ್ತಿರುತ್ತಾಳೆ. ನಿಮಗೇ ಒಪ್ಪಿಗೆ ಇರೋವಾಗ, ನಾವೇನು ಮಾಡೋಕ್ಕಾಗತ್ತೆ?' ನಿಜಕ್ಕೂ ನಾನೇನೂ ಮಾಡುವ ಪರಿಸ್ಥಿತಿಯಲ್ಲಿರಲಿಲ್ಲ. ನನ್ನ ಆಫೀಸ್ ಕೆಲಸ ಬೆಟ್ಟದಷ್ಟು ಜವಾಬ್ದಾರಿ ನನ್ನ ಮೇಲೆ ಹೊರೆಸಿರುವಾಗ, ನಾನು ಮಗಳ ಚಲನವಲನ, ಅವಳ ಮನೋವಿಕಾಸ, ಮುದ್ದು ಕಂಗಳ ಅಪೇಕ್ಷೆಗಳು ಹೀಗೆ ಯಾವುದನ್ನು ಗಮನಿಸಲು ಸಾಧ್ಯವಿಲ್ಲದಂತಾಯಿತು. ನಮ್ಮ ನಮ್ಮ ಪಾಡಿಗೆ ನಾವು ಒಂದೇ